
# ಇರುವುದೊಂದೇ ಜೀವ...



ಕಂನಾಡಿಗಾ ನಾರಾಯಣ

‘ಇರುವುದೊಂದೇ ಜೀವ... ದುಡುಕಿ ಒಮ್ಮೆ ಅದನ್ನು ಕಳೆದುಕೊಂಡರೆ ಮತ್ತೆ ಮರಳಿ ಪಡೆಯಲು ಸಾಧ್ಯವಿಲ್ಲ. ಆದರೆ ಜೀವನ ಹಾಗಲ್ಲ, ಬೇಕಾದರೆ ಮತ್ತೊಂದು ಜೀವನವನ್ನು ರೂಪಿಸಿಕೊಳ್ಳಬಹುದು... ಈ ಜೀವನದಲ್ಲಿ ಯಾರೂ ಅನಿವಾರ್ಯವಲ್ಲ. ಅವನಿಲ್ಲದಿದ್ದರೆ ಇನ್ನೊಬ್ಬ ಸಿಗುತ್ತಾನೆ. ಆದರೆ ತಂದೆ–ತಾಯಿಯರನ್ನು ಸೃಷ್ಟಿಸಲು ಸಾಧ್ಯವೇ? ಅವರ ಮುಖ ನೋಡು. ನಿನಗಾಗಿ ಏನೆಲ್ಲ ತ್ಯಾಗಕ್ಕೆ ಸಿದ್ಧರಾಗಿದ್ದಾರೆ. ಆದರೆ ಅವನು? ಸಾಕುವುದಿರಲಿ, ಮಾತುಕತೆಗೇ ಕೂರದೆ ಕಳ್ಳನ ಥರಾ ಓಡಿಹೋಗುತ್ತಿದ್ದಾನೆ. ಅಂಥವನಿಗಾಗಿ ಪ್ರಾಣಬಿಡಲು ಸಿದ್ಧವಾಗಿದ್ದೀಯಲ್ಲ. ಎಂಥ ದಡ್ಡಿ ನೀನು...’ ಎಂಬ ಡಾ. ಸಂಧ್ಯಾಳ ಮಾತು ಆ ಕ್ಷಣಕ್ಕೆ ಸರಿಯೆನಿಸಿದರೂ, ನನ್ನ ಮನಸ್ಸಿನಲ್ಲಿ ಬೇರೆಯದೇ ಓಡುತ್ತಿತ್ತು. ‘ನಿಮ್ಮ ಜೀವನದಲ್ಲಿ ಹೀಗಾಗಿದ್ದಿದ್ದರೆ ನೀವು ಹೀಗೆ ಹೇಳುತ್ತಿರಲಿಲ್ಲ ಮೇಡಂ...’ ಎಂದು ಹೇಳಬೇಕೆಂದು ಮನಸ್ಸಿಗೆ ಬಂದರೂ, ನನ್ನ ನೀಚಗಂಡನ ಸ್ಥಾನದಲ್ಲಿ ಅವರ ಗಂಡನನ್ನು ಕಲ್ಪಿಸಿಕೊಂಡರೆ ಅವರಿಗೆ ಕಸಿವಿಸಿಯಾದೀತೆಂದು ತಡೆದೆ.

ಯಾವ ಕ್ಷಣದಲ್ಲಿ ಯಾವ ಸಂಬಂಧಗಳು ಏಳುತ್ತವೆ, ಯಾವ ಸಂಬಂಧಗಳು ಬೀಳುತ್ತವೆ ಎಂದು ಹೇಳಲು ಸಾಧ್ಯವಿಲ್ಲ. ಆದ್ದರಿಂದ ಇರುವ ಸಂಬಂಧವನ್ನು ಗಟ್ಟಿಯಾಗಿ ಉಳಿಸಿಕೊಂಡುಬಿಡಬೇಕೆಂದು ನಾನು ಏನೆಲ್ಲ ಪ್ರಯತ್ನಿಸುತ್ತಿದ್ದರೂ, ಅವನಾದರೂ ಏಕೆ ಸ್ಪಂದಿಸುತ್ತಿಲ್ಲವೆಂದೇ ನನಗೆ ಅರ್ಥವಾಗುತ್ತಿಲ್ಲ. ನನ್ನಲ್ಲಿ ಏನು ಕೊರತೆಯನ್ನು ಕಂಡಿದ್ದಾನವನು? ನಾನೇನು ಸುಂದರವಾಗಿಲ್ಲವೇ? ಅವನಿಗಿಂತ ಚೆನ್ನಾಗಿ ಕಾರು ಓಡಿಸುವುದಿಲ್ಲವೇ? ಕಾಲೇಜಿನಲ್ಲಿ ಆ್ಯಂಕರಿಂಗ್‌ಗೆ ನನ್ನನ್ನೇ ಆಯ್ದುಕೊಳ್ಳುತ್ತಾರಲ್ಲ...

ಒಮ್ಮೆ ಪ್ರಖ್ಯಾತ ವಾಗ್ಮಿ ಗುರುರಾಜ ಕರಜಗಿ ಅವರು ಅತಿಥಿಯಾಗಿ ಬಂದಿದ್ದಾಗ, ಅವರ್‍ಯಾರೆಂದು ತಿಳಿಯದೇ ಅವರ ಮುಂದೆ ನಾನು ಮಾಡಿದ ನಿರೂಪಣೆಯನ್ನು ಎಲ್ಲರೂ ಮೆಚ್ಚಿಕೊಂಡಿದ್ದರು. ಅಪ್ಪ ಯಾವಾಗಲೂ ಹೇಳುತ್ತಿದ್ದರು, ಮಾತನಾಡಲು ನಿಂತರೆ ನಮ್ಮ ಮುಂದಿರುವವರನ್ನೆಲ್ಲ ದಡ್ಡರು, ಕತ್ತೆಗಳು ಎಂದುಕೊಳ್ಳಬೇಕು, ಇಲ್ಲವಾದರೆ ಮಾತು ಬರುವುದಿಲ್ಲವೆಂದು. ಅದೇ ಮಾತನ್ನು ನಡುಗುತ್ತಿದ್ದ ನನ್ನ ಸಹ ನಿರೂಪಕನಿಗೂ ಧೈರ್ಯ ತುಂಬಲು ಮೈಕ್ ಮುಂದೆಯೇ ಹೇಳಿಬಿಟ್ಟಿದ್ದೆ. ಆ ಮಾತು ಎಲ್ಲಿ ಎಲ್ಲರಿಗೂ ಕೇಳಿಸಿಬಿಟ್ಟಿತೋ ಎಂದು ಗಾಬರಿಬಿದ್ದು ನೋಡಿದರೆ, ಸದ್ಯ ಮೈಕ್ ಆಫ್ ಆಗಿತ್ತು.

ಇದೇ ನನ್ನ ವಾಗ್ಝರಿಯನ್ನು ಕೌನ್ಸೆಲಿಂಗ್ ಮಾಡುತ್ತಿದ್ದ ಡಾ. ಸಂಧ್ಯಾ ಮೇಡಂ ಕೂಡ ಮೂಗಿನ ಮೇಲೆ ಬೆರಳಿಟ್ಟುಕೊಂಡು ಕೇಳಿಸಿಕೊಳ್ಳುತ್ತಿದ್ದರು. ಮಧ್ಯೆ ಮಾತಾಡಿದರೆ ಎಲ್ಲಿ ನನ್ನ ಮಾತಿನ ಓಘ ನಿಂತುಹೋಗಿಬಿಡುತ್ತದೋ ಎಂದು ಕಿವಿಗೊಟ್ಟು ಕೇಳಿಸಿಕೊಳ್ಳುತ್ತಿದ್ದರು. ‘ಎಂಥ ವಾಕ್ಚಾತುರ್ಯವಿದೆಯೇ ನಿನಗೆ? ಒಂದೊಂದು ಘಟನೆಯನ್ನೂ ಪದಗಳನ್ನೂ ಎಷ್ಟು ಚೆನ್ನಾಗಿ ಪದರಪದರವಾಗಿ ಬಿಚ್ಚಿಡುತ್ತಾ ಹೋಗುತ್ತೀಯಲ್ಲ... ಟಿ.ವಿ. ಆ್ಯಂಕರಿಂಗ್‌ಗೆ ಕಳಿಸಬೇಕು ನಿನ್ನ...’ ಎಂದು ಅಭಿನಂದಿಸುತ್ತಿದ್ದರು. ಆದರೆ ಆಗ ಈ ಮಾತೇ ನನಗೆ ಶತ್ರುವಾಗಬಹುದೆಂದು ಗೊತ್ತಿರಲಿಲ್ಲ.

ಅವನು ಹೆಣ್ಣು ನೋಡಲೆಂದು ನಮ್ಮ ಮನೆಗೆ ಬಂದಾಗ, ಗಂಡು ಯಾರೆಂದೇ ಗೊತ್ತಾಗುವಂತಿರಲಿಲ್ಲ, ಹಾಗಿದ್ದ ಅವನು. ಎಷ್ಟೋ ಮನೆಗಳನ್ನು ಎಡತಾಕಿದ್ದರೂ ಒಬ್ಬೊಬ್ಬರು ಒಂದೊಂದು ಕಾರಣ ಹೇಳಿ ನಿರಾಕರಿಸುತ್ತಿದ್ದರಂತೆ. ಹೀಗೆಂದು ಮದುವೆಯಾದ ಹೊಸತರಲ್ಲಿ ಅವನೇ ಹೇಳಿದ್ದ. ನನ್ನ ಜೀವನದಲ್ಲಿ ಮೊಟ್ಟಮೊದಲ ಬಾರಿಗೆ ಮತ್ತೊಬ್ಬರ ಮುಂದೆ ನನ್ನ ದೇಹಸಿರಿಯನ್ನು ಅಧಿಕೃತವಾಗಿ ತೋರಿಸಬೇಕೆಂದು ಬಂದಾಗ ನನಗೇ ಒಳಗೊಳಗೆ ಏನೋ ಒಂಥರಾ ಕಸಿವಿಸಿ. ಮದುವೆಯೂ ಬೇಡ, ಹೀಗೆ ಇನ್ನೊಬ್ಬರ ಮುಂದೆ ದೇಹ ಪ್ರದರ್ಶಿಸುವುದೂ ಬೇಡ ಎಂದು ಮುಸುಮುಸು ಅಳುತ್ತಿದ್ದಾಗ ಅಮ್ಮ ಗದರಿದ್ದಳು. ಅವಳ ಕಣ್ಣಿನ ಆಕ್ರೋಶ ಕಂಡು ಸುಮ್ಮನಾಗಿಬಿಟ್ಟಿದ್ದೆ. ನನಗೆ ಬೇಗ ಮದುವೆ ಮಾಡಿಸಿ ಜೀವನದಲ್ಲಿ ಸೆಟ್ಲ್ ಆಗಿಬಿಡಬೇಕೆಂದು ಏನೆಲ್ಲ ನಾಟಕ ಆಡಿದ್ದಳು ಅವಳು. ‘ಇನ್ನೂ ಚಿಕ್ಕ ವಯಸ್ಸು, ಈಗಲೇ ಮದುವೆ ಬೇಡ...’ ಎಂದು ಅಪ್ಪನೆಂದಾಗ ಸಿಡಿದುಬಿದ್ದಿದ್ದಳು! ‘ಬರೀ ದುಡ್ಡು ದುಡ್ಡು ಅಂತ ಸಾಯ್ತೀರಾ. ಸತ್ತಾಗ ಏನು ಹೊತ್ತುಕೊಂಡು ಹೋಗುತ್ತೀರಾ. ಇನ್ನಾರು ತಿಂಗಳೊಳಗೆ ಮದುವೆ ಮಾಡದಿದ್ದರೆ ಈ ಮನೆಯೊಳಗೆ ಹೆಣ ಬೀಳುತ್ತದೆ...’ ಎಂದು ಎಚ್ಚರಿಸಿದವಳು,